ಪ್ರವಾಸದ ಪರಿಕಲ್ಪನೆ ಹಾಗೂ ಮದುವೆಯ ಸಂಭ್ರಮ ಎರಡೂ ಮಿಳಿತಗೊಂಡು 'ಡೆಸ್ಟಿನೇಷನ್ ವೆಡ್ಡಿಂಗ್' ಎನ್ನುವ ಪರಿಕಲ್ಪನೆ ಚಾಲ್ತಿಗೆ ಬಂದಿದೆ. ಸಿರಿವಂತರು, ಉದ್ಯಮಿಗಳು, ಸಿನಿಮಾ ನಟ–ನಟಿಯರು ಹಾಗೂ ರಾಜಕಾರಣಿಗಳ ಕುಟುಂಬಗಳಲ್ಲಿ ಹೆಚ್ಚಾಗಿ ಕಾಣಿಸುವ 'ಡೆಸ್ಟಿನೇಷನ್ ವೆಡ್ಡಿಂಗ್' ಇತ್ತೀಚಿನ ವರ್ಷಗಳಲ್ಲಿ ತನ್ನ ವ್ಯಾಪ್ತಿಯನ್ನು ಹೆಚ್ಚಿಸಿಕೊಳ್ಳುತ್ತಲೇ ಇದೆ. ಮದುವೆ ನಿರ್ವಹಣೆಯ ಸೂತ್ರಗಳನ್ನೆಲ್ಲ ಇವೆಂಟ್ ಮ್ಯಾನೇಜರ್‌ಗಳಿಗೊಪ್ಪಿಸಿ ವಧುವರರ ಕುಟುಂಬದವರೂ ಅತಿಥಿಗಳಂತೆ ಆನಂದಿಸುವ ಅವಕಾಶವನ್ನು ಕಲ್ಪಿಸುವ ಈ ಮದುವೆ, ವಿವಾಹದ ಆಚರಣೆ ಹಾಗೂ ಸಂಭ್ರಮದೊಂದಿಗೆ ಪ್ರವಾಸದ ಅನುಭವವನ್ನೂ ನೀಡುತ್ತದೆ. ಜೈಪುರ, ಹಂಪಿ, ಗೋವಾಗಳು ಈಗ ಪ್ರವಾಸಿ ತಾಣಗಳಾಗಿ ಮಾತ್ರವಲ್ಲ, 'ಡೆಸ್ಟಿನೇಷನ್ ವೆಡ್ಡಿಂಗ್'ನ ಹಾಟ್ ಸ್ಪಾಟ್‌ಗಳಾಗಿಯೂ ಪ್ರಸಿದ್ಧ.



# ಪ್ರವಾಸಿ ಸ್ಥಳದಲ್ಲಿ ಅಂತರಪಟ ನಂಟಿನೊಂದಿಗೆ ನೋಟ